ಕೆ. ವಿಜಯ ಕುಮಾರ್ ಶೆಟ್ಟಿ: ಪ್ರಶ್ನೋತ್ತರ ವೇಳೆ ಅತ್ಯಂತ ಪ್ರಾಮುಖ್ಯವಾದದ್ದು. ಇದಕ್ಕೆ ಪ್ರಾರಂಭದಲ್ಲಿ ಅವಕಾಶ ಕೊಡಬೇಕು. ಅನಂತರ ಬೇರೆ ವಿಚಾರವನ್ನು ಮುಂದುವರೆಸಬಹುದು.

ಶ್ರೀ ಡಿ.ಬಿ. ಚಂದ್ರೇಗೌಡ (ಕಾನೂನು ಹಾಗೂ ಸಂಸದೀಯ ವ್ಯವಹಾರಗಳ ಸಚಿವರು): ಮಾನ್ಯ ಅಧ್ಯಕ್ಷರೆ, ವಿಚಾರದ ಗಂಭೀರತೆಯನ್ನು ಕಡಿಮೆ ಮಾಡಬೇಕು ಎನ್ನತಕ್ಕ ದೃಷ್ಟಿ ಸರ್ಕಾರದ್ದೂ ಅಲ್ಲ, ವಿರೋಧ ಪಕ್ಷದವರಿಗಿರುವ ಕಳಕಳಿಯನ್ನು ನಾವು ಅರ್ಥ ಮಾಡಿಕೊಂಡಿದ್ದೇವೆ. ತಾವು ಆಗಲೇ ಅಪ್ಪಣೆ ಕೊಡಿಸಿದ್ದೀರಿ, ಪ್ರಶ್ನೋತ್ತರ ವೇಳೆ ಆದಮೇಲೆ ಇದನ್ನು ತೆಗೆದುಕೊಳ್ಳೋಣ.

ಅಧ್ಯಕ್ಷರು: ಪ್ರಶ್ನೋತ್ತರ ವೇಳೆ ಆದಮೇಲೆ ತೆಗೆದುಕೊಳ್ಳೋಣ.

ಶ್ರೀ ಕೆ. ಹೆಚ್. ಹನುಮೇಗೌಡ: ಪ್ರಶ್ನೋತ್ತರ ವೇಳೆ ಆದಮೇಲೆ ಇದರ ಬಗ್ಗೆ ಚರ್ಚೆಗೆ ಹೆಚ್ಚು ಕಾಲವನ್ನು ಕೊಡಬೇಕು, ಇರತಕ್ಕ ವಿಚಾರಗಳನ್ನು ಎಲ್ಲಾ ಶಾಸಕರು ಸರ್ಕಾರದ ಗಮನಕ್ಕೆ ತರಬೇಕು. ಹತ್ತು ನಿಮಿಷನೋ ಹದಿನೈದು ನಿಮಿಷನೋ ಕೊಟ್ಟು ಬಿಲ್ಲನ್ನು ಹೊಡೆದುಬಿಟ್ಟರೆ ನಮಗೆ ಇಲ್ಲಿ ಇರಲು ಕಷ್ಟವಾಗುತ್ತದೆ, ಊರಿಗೆ ಹೋಗಲೂ ಕಷ್ಟವಾಗುತ್ತದೆ. ಸಾಕಷ್ಟು ಕಾಲಾವಕಾಶ ಕೊಡಬೇಕು.

ಅಧ್ಯಕ್ಷರು: ದಯವಿಟ್ಟು ಇಲ್ಲಿ ಕೇಳಿ ಗೌಡರೆ, ತಾವು ಹೆಚ್ಚು ಕಾಲವೆನ್ನುವುದರ ಬಗ್ಗೆ ಅನಂತರ ಕೇಳಿ. We will take up after question hour.

ಶ್ರೀ ಕೆ. ಹೆಚ್. ಹನುಮೇಗೌಡ: ಸಾಕಷ್ಟು ಕಾಲಾವಕಾಶವನ್ನು ಕೊಟ್ಟರೆ ಆಗಬಹುದು.

ಅಧ್ಯಕ್ಷರು: ಇನ್ನೂ ಅದರ ಬಗ್ಗೆ ನಾನು ಹೇಳಿಯೇ ಇಲ್ಲ, ಆಗಲೇ ತಾವು ಹೇಳಿದರೆ ಹೇಗೆ? ಈಗ ಇಂದಿನ ಕಾರ್ಯಕ್ರಮದ ಪಟ್ಟಿಯ ಪ್ರಕಾರ ಪ್ರಶ್ನೋತ್ತರವನ್ನು ತೆಗೆದುಕೊಳ್ಳೋಣ.

(2) ಪ್ರಶ್ನೋತ್ತರಗಳು

(ಅ) ಚುಕ್ಕೆ ಗುರುತಿನ ಪ್ರಶ್ನೆಗಳಿಗೆ ಸದನದಲ್ಲಿ ಮೂಲಕ ನೀಡಲಾದ ಉತ್ತರಗಳು.

ಮೈಸೂರು ನಗರಕ್ಕೆ ವಿದ್ಯುಚ್ಛಕ್ತಿ ನೀಡಿಕೆ

1(54) - ಶ್ರೀ ಶಂಕರಲಿಂಗೇಗೌಡ ಹೆಚ್.ಎಸ್ (ಚಾಮರಾಜ) : ಮಾನ್ಯ ಇಂಧನ ರಾಜ್ಯ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

1) ಮೈಸೂರು ನಗರದಲ್ಲಿ ಯಾವ ಯಾವ ಬಡಾವಣೆಗಳಲ್ಲಿ ವೋಲ್ಟೇಜ್ ಸಮಸ್ಯೆ ಇದೆ?

2) ಮೈಸೂರು ನಗರಕ್ಕೆ ಹಾಲಿ ಎಷ್ಟು ಪ್ರಮಾಣದ ವಿದ್ಯುತ್ ಅವಶ್ಯಕತೆ ಇದೆ?

3) ಈಗ ನೀಡುತ್ತಿರುವ ವಿದ್ಯುತ್ ಪ್ರಮಾಣ ಎಷ್ಟು?

4) ಮೈಸೂರು ನಗರಕ್ಕೆ ಗುಣಮಟ್ಟದ ವೋಲ್ಟೇಜ್ ರಹಿತವಾಗಿ ವಿದ್ಯುಚ್ಛಕ್ತಿ ಒದಗಿಸಲು ಸರ್ಕಾರ ಕೈಗೊಂಡಿರುವ: ಕೈಗೊಳ್ಳಬಹುದಾದ ಕ್ರಮಗಳೇನು? ವಿವರಿಸಿ.

ಶ್ರೀ ಬಸವರಾಜ ಹೆಚ್. ಪಾಟೀಲ್ (ಇಂಧನ ರಾಜ್ಯ ಸಚಿವರು)

1) ಮೈಸೂರು ನಗರದಲ್ಲಿ ಮಂಡಿ ಮೊಹಲ್ಲ ಭಾಗಶಃ ಶಾಂತಿನಗರ, ಬಾಗಶಃ ಗೌಶ್ಯ ನಗರ ಟಿ.ಕೆ. ಲೇಔಟ್, ಜೈನ್ ಹಾಸ್ಪಿಟಲ್ ಬಡಾವಣೆಗಳಲ್ಲಿ ವೋಲ್ಟೇಜ್ ಸಮಸ್ಯೆ ಇದೆ.

2) ಮೈಸೂರು ನಗರಕ್ಕೆ ಹಾಲಿ 1 ಮಿಲಿಯನ್ ಯೂನಿಟ್ ವಿದ್ಯುತ್ ಅವಶ್ಯಕತೆ ಇದೆ. 1 ಮಿಲಿಯನ್ ಯೂನಿಟ್

3) ಶಿವಮೊಗ್ಗ, ಮೈಸೂರು ಡಬಲ್ ಸರ್ಕ್ಯೂಟ್ ಮೇಲೆ ಇರುವ ಹಾಸನದ ಲೋಡನ್ನು ಶಿವಮೊಗ್ಗ ಬೆಂಗಳೂರು ಲೈನಿಗೆ ಪ್ರಾರಂಭಿಸಲು ಈಗಾಗಲೇ ಟೆಂಡರ್ ಕರೆಯಲಾಗಿದೆ. ಸುಮಾರು ಒಂದೂವರೆ ವರ್ಷದಲ್ಲಿ ಈ ಕಾರ್ಯ ಪೂರ್ಣಗೊಳ್ಳುವ ನಿರೀಕ್ಷೆಯಲ್ಲಿದೆ.

ಮೈಸೂರಿನಲ್ಲಿ (ಬಸ್ತಿಪುರ) 400 ಕೆವಿ ವಿದ್ಯುತ್ ಕೇಂದ್ರವನ್ನು ಸ್ಥಾಪಿಸುವ ಪ್ರಸ್ತಾಪವಿದ್ದು ಇದಕ್ಕಾಗಿ 90 ಎಕರೆ ಜಮೀನು ಖರೀದಿಸಲಾಗಿದೆ. ಈ ಕೇಂದ್ರದ ಕಾರ್ಯವನ್ನು ಕೈಗೊಳ್ಳುವಂತೆ ಈ ಕೇಂದ್ರದ ಕಾರ್ಯವನ್ನು ಕೈಗೊಳ್ಳುವಂತೆ ಪವರ್ ಗ್ರಿಡ್ ಇಂಡಿಯಾ ಲಿ ಎಂದು ಕೇಂದ್ರದ ಸಂಸ್ಥೆಯನ್ನು ಕೋರಲಾಗಿದೆ.

4) ಮೈಸೂರು ನಗರದ ವಿವಿಧ ಬಡಾವಣೆಗಳಲ್ಲಿ 57 ಹೆಚ್ಚುವರಿ ಪರಿವರ್ತಕಗಳನ್ನು ಅಳವಡಿಸಲು ಕ್ರಮ ಕೈಗೊಳ್ಳಲಾಗಿದೆ. ಅಲ್ಲದೆ ಹೊಟಗಳ್ಳಿ ಸ್ವೀಕರಣಾ ಕೇಂದ್ರದಲ್ಲಿ 66 ಕೆವಿ ಡಬಲ್ ಸರ್ಕಿಟ್ ಮಾರ್ಗದ ಕಾಮಗಾರಿ ಸಹ ಪ್ರಗತಿಯಲ್ಲಿದೆ.

ಶ್ರೀ ಹೆಚ್.ಎಸ್. ಶಂಕರಲಿಂಗೇಗೌಡ : ಮಾನ್ಯ ಅಧ್ಯಕ್ಷರೆ, ಮೈಸೂರು ನಗರ ಸಾಂಸ್ಕೃತಿಕ ನಗರ ತನ್ನದೇ ಆಗಿರತಕ್ಕ ವೈವಿದ್ಯಮಯವಾಗಿರುವ ಹಿನ್ನೆಲೆಯನ್ನು ಹೊಂದಿರತಕ್ಕ ನಗರ ಇಂದು ಕತ್ತಲಲ್ಲಿ ಇದೆ ಎಂದರೆ ತಪ್ಪಾಗಲಾರದು. ಮೈಸೂರು ನಗರದಲ್ಲಿ ಓಲ್ಟೇಜ್ ಸಮಸ್ಯೆ ತುಂಬಾ ಬಡಾವಣೆಗಳಲ್ಲಿದೆ. ಸರ್ಕಾರದವರು ಇದಕ್ಕೆ ಒಂದು ಮಿಲಿಯನ್ ಯೂನಿಟ್ ವಿದ್ಯುತ್ ಬೇಕು ಎಂದು ಉತ್ತರದಲ್ಲಿ ಹೇಳಿದ್ದಾರೆ. ಆ ವಿದ್ಯುತ್ ತೆಗೆದುಕೊಳ್ಳಲು ಏನು ಕ್ರಮ ಕೈಗೊಂಡಿದ್ದೀರಿ?

ಶ್ರೀ ಬಸವರಾಜ ಎಚ್. ಪಾಟೀಲ್: ಮಾನ್ಯ ಅಧ್ಯಕ್ಷರೆ, ಈಗಾಗಲೇ ಒಂದು ಮಿಲಿಯನ್ ಯೂನಿಟ್ ವಿದ್ಯುತ್ತನ್ನು ಮೈಸೂರು ನಗರಕ್ಕೆ ಪೂರೈಸುತ್ತಿದ್ದೇವೆ. ತಾವು ಓಲ್ಟೇಜ್ ಕಡಿಮೆ ಇದೆ ಎಂದು ಪ್ರಶ್ನೆ ಕೇಳಿದ್ದೀರಿ, ನಾವು ಭಾಗಶಃ ಕೆಲವು ಬಡಾವಣೆಗಳಲ್ಲಿ ಕಡಿಮೆ ಇದೆಯೆಂದು ಹೇಳಿದ್ದೇವೆ ಅದನ್ನು ಸುಧಾರಣೆ ಮಾಡಲು ಏನೇನು ಕ್ರಮ ತೆಗೆದುಕೊಳ್ಳಬೇಕು ಎಂಬ ಬಗ್ಗೆ ತಮಗೆ ನೀಡಿರುವ ಉತ್ತರದಲ್ಲಿ ತಿಳಿಸಿದ್ದೇನೆ. ಈಗ ಶಿವಮೊಗ್ಗ - ಮೈಸೂರು ಡೈರೆಕ್ಟ್ ಲೈನು ಏನು ಬರುತ್ತಿದೆ; ಆ ಲೈನನ್ನು ಬೆಂಗಳೂರು ಹಾಸನ ಲೈನ್ ಏನಿದೆ ಅದಕ್ಕೆ ಬದಲಾವಣೆ

ಮಾಡತಕ್ಕ ಕಾರ್ಯಕ್ರಮ ನಮ್ಮಲ್ಲಿ ಇದೆ. ಆ ಕೆಲಸವನ್ನು ಆದಷ್ಟು ಬೇಗ ಮಾಡುತ್ತೇವೆ. ಇದರಿಂದ 60-70 ಮೆಗಾವ್ಯಾಟ್ ವಿದ್ಯುತ್ ಹಾಸನಕ್ಕೆ ಹೋಗುವುದರ ಬದಲಾಗಿ ಡೈರೆಕ್ಟ್ ಮೈಸೂರಿಗೆ ಬರತಕ್ಕ ವ್ಯವಸ್ಥೆ ಮಾಡುತ್ತಿದ್ದೇವೆ. ಈ ಕೆಲಸ ಪ್ರಗತಿಯಲ್ಲಿದೆ. ಖಂಡಿತವಾಗಿ ಆದಷ್ಟು ಬೇಗ ಅದನ್ನು ಮಾಡುತ್ತೇವೆ.

ಶ್ರೀ ಎ. ರಾಮದಾಸ್ : ಮಾನ್ಯ ಅಧ್ಯಕ್ಷರೆ, ಉತ್ತರದಲ್ಲಿ ಕೇವಲ 25 ಪರ್‌ಸೆಂಟ್ ಮಾತ್ರ ಸತ್ಯಾಂಶ ಇದೆ ಓಲ್ಟೇಜ್‌ನ ಸಮಸ್ಯೆ ಕೇವಲ ಒಂದೆರಡು ಬಡಾವಣೆಗಳದ್ದಲ್ಲ. ಪ್ರತಿನಿತ್ಯ ಮೈಸೂರಿಗೆ 225 ಕೆ.ವಿ. ವಿದ್ಯುತ್ ಬರಬೇಕಾಗಿದೆ. ಅದರ ಬದಲಿಗೆ ಪೀಕ್ ಹವರ್‌ನಲ್ಲಿ ಕೇವಲ 165 ರಿಂದ 170 ಕೆ.ವಿ. ವಿದ್ಯುತ್ ಮಾತ್ರ ಬರುತ್ತಿದೆ. ಲೀನ್ ಹವರಲ್ಲೂ ಕೇವಲ 185 ಕೆ.ವಿ. ವಿದ್ಯುತ್ ಮಾತ್ರ ಬರುತ್ತಿದೆ. ಆದ್ದರಿಂದ ಪ್ರತಿ ದಿವಸ ಒಂದೂವರೆ ಗಂಟೆಗಳ ಕಾಲ ಓಲ್ಟೇಜ್‌ನ ಸಮಸ್ಯೆ ಇಡೀ ನಗರದಲ್ಲಿದೆ. ಇದರ ಬಗ್ಗೆ ಏಕೆ ಉತ್ತರ ಬಂದಿಲ್ಲ. ವೆಂಬುದು ಗೊತ್ತಿಲ್ಲ ಮೈಸೂರು ನಗರಕ್ಕೆ ನಿನ್ನೆಯ ಮಾಹಿತಿ ಪ್ರಕಾರ 1.22 ಮಿಲಿಯನ್ ಯೂನಿಟ್ ವಿದ್ಯುತ್ ಬೇಕಾಗಿದೆ. ಅಂದರೆ 22 ಲಕ್ಷ ಮಿಲಿಯನ್ ಯೂನಿಟ್‌ಗಳು ಬೇಕಾಗಿದ್ದರೂ ಶಾರ್ಟೇಜ್ ಅಷ್ಟಿದೆ. ಆದರೆ ತಮ್ಮ ಪ್ರಕಾರ ಕೇವಲ ಒಂದು ಮಿಲಿಯನ್ ಯೂನಿಟ್‌ಗಳು ಮಾತ್ರ ಶಾರ್ಟೇಜ್ ಇದೆಯೆಂದು ಹೇಳಿದ್ದೀರಿ. ಎಷ್ಟು ಸಪ್ಲೈ ಬೇಕಾಗಿದೆ ಅಷ್ಟು ಸಾಕಾಗುವುದಿಲ್ಲವೆಂದು ಮೈಸೂರು ನಗರದಲ್ಲಿ ಅನಧಿಕೃತ ಕನ್‌ಸ್ಟ್ರಕ್ಷನ್‌ಗಳಿಗೆ ಕೊಡಬೇಕಾಗಿದ್ದ ವಿದ್ಯುತ್ ಸಂಪರ್ಕವನ್ನೂ ಕೊಟ್ಟಿಲ್ಲ. ಆದ್ದರಿಂದ ನಾವು ಕೊಟ್ಟಿರುವಂಥ ಉತ್ತರ ಸಮಂಜಸವಾಗಿಲ್ಲ. ಆನಂತರ ಹಾಸನದ ಟ್ಯಾಪಿಂಗ್ ಬಗ್ಗೆ ಹೇಳಿದಿರಿ ಮೈಸೂರಿಗೆ ಶಿವಮೊಗ್ಗದಿಂದೇನು ಲೈನು ಬರುತ್ತಿತ್ತು ಅದನ್ನು ಹಾಸನದಲ್ಲಿ ಟ್ಯಾಪ್ ಮಾಡಿದರು. ಇದರಿಂದಾಗಿ ಇಡೀ ಮೈಸೂರು ನಗರಕ್ಕೆ ಸಮಸ್ಯೆ ಆಗುತ್ತಿದೆ. ವಿಶೇಷವಾಗಿ ಗ್ರಿಡ್ ಫೆಯಿಲ್ಯೂರ್ ರೆಗ್ಯುಲರ್ ಆಗಿದೆ. ಲೈನನ್ನು ಸೆಪರೇಟ್ ಮಾಡುವುದರ ಬಗ್ಗೆ ನಾವು ಹೇಳುತ್ತಿಲ್ಲ. ಆದರೆ ಮೈಸೂರು ಲೈನನ್ನು ಅನಧಿಕೃತವಾಗಿ ಟ್ಯಾಪಿಂಗ್ ಮಾಡಿದಿರಲ್ಲಾ ಅದನ್ನು ಯಾವಾಗ ನಿಲ್ಲಿಸುತ್ತೀರೆಂದರೆ ಒಂದೂವರೆ ವರ್ಷ ಬೇಕು ಎಂದು ತಾವು ಹೇಳುವುದಾದರೆ ಮೈಸೂರಿನ ಜನತೆ ಒಂದೂವರೆ ವರ್ಷಗಳ ವರೆಗೆ ಏನು ಮಾಡಬೇಕು?

ಶ್ರೀ ಬಸವರಾಜ ಎಚ್. ಪಾಟೀಲ್ : ಇದು ಒಂದೇ ಅಲ್ಲ, ಮೈಸೂರು ನಗರದ ಓಲ್ಟೇಜ್ ಸುಧಾರಣೆ ಮಾಡಲು ಇನ್ನೂ ಸಾಕಷ್ಟು ಕ್ರಮಗಳನ್ನು ತೆಗೆದುಕೊಳ್ಳುತ್ತಿದ್ದೇವೆ. ಪೀಕ್ ಹವರ್‌ನಲ್ಲಿ ಎಲ್ಲಾ ಪಟ್ಟಣಗಳ ಬೆಳಿಗ್ಗೆ ಮತ್ತು ಸಂಜೆ ಕರೆಂಟ್ ಷಾರ್ಟೇಜ್ ಇರುವುದು ಸ್ವಾಭಾವಿಕ. ಅದನ್ನು ನಾನು ಒಪ್ಪುತ್ತೇನೆ. ನಾವೇನು ಉತ್ತರ ಕೊಟ್ಟಿದ್ದೇವೆ ಅದರಲ್ಲಿ ಭಾಗಶಃ ಎಂದೇ ಹೇಳಿದ್ದೇವೆ. ತಾವು ಹೇಳಿದ ಪ್ರಕಾರ ನಾವೀಗ ಮೈಸೂರು ನಗರಕ್ಕೆ ಸರಾಸರಿ 1.2 ಮಿಲಿಯನ್ ಯೂನಿಟ್ ವಿದ್ಯುತ್ತನ್ನು ಈಗ ಸರಬರಾಜು ಮಾಡುತ್ತಿದ್ದೇವೆ. ಇದರ ಜೊತೆಗೆ ತಮಗೆ ನೀಡಿರುವ ಉತ್ತರದಲ್ಲಿ ತಿಳಿಸಿರುವಂತೆ ಬಸ್ತಿಪುರದಲ್ಲಿ 400 ಕೆವಿ ವಿದ್ಯುತ್ ಕೇಂದ್ರವನ್ನು ಸ್ಥಾಪಿಸುವ ಪ್ರಸ್ತಾವನೆ ಇದ್ದು ಅದಕ್ಕಾಗಿ 90 ಎಕರೆ ಜಮೀನನ್ನು ಈಗಾಗಲೇ ಖರೀದಿಸಲಾಗಿದ್ದು, ಈ ಕೇಂದ್ರದ ಕಾರ್ಯವನ್ನು ಕೈಗೊಳ್ಳುವಂತೆ ಪವರ್ ಗ್ರಿಡ್ ಇಂಡೀಯಾ ಲಿಮಿಟೆಡ್‌ರವರಿಗೆ ಈಗಾಗಲೇ ಪ್ರಸ್ತಾವನೆಯನ್ನು ಕಳುಹಿಸಿಕೊಟ್ಟಿದ್ದೇವೆ.

ಶ್ರೀ ಹೆಚ್.ಎಸ್. ಶಂಕರಲಿಂಗೇಗೌಡ : ಮೈಸೂರು ನಗರ ಪ್ರವಾಸಿಗರ ತಾಣ. ದಿನಕ್ಕೆ ಐದಾರು ಸಲ ವಿದ್ಯುತ್ ಹೋಗುತ್ತಿದ್ದರೆ ಹೊರಗಡೆಯಿಂದ ಬಂದವರು ಮೈಸೂರಿನ ಮಹಿಮೆಯನ್ನು ಕೊಂಡಾಡಿಕೊಂಡು ಹೋಗಬೇಕೋ ಅಥವಾ ಬೈದುಕೊಂಡು ಹೋಗಬೇಕೋ? ಇದರ ಬಗ್ಗೆ ಏನು ಯೋಚನೆ ಮಾಡಿದ್ದೀರಿ?

ಶ್ರೀ ಎ. ರಾಮದಾಸ್ : ಓಲ್ಟೇಜ್ ಸಮಸ್ಯೆಯಿಂದ ಗ್ರಿಡ್ ಒಂದು ಸಲ ಹೋದರೆ 25 ರಿಂದ 30 ನಿಮಿಷ ಈ ರೀತಿ ಆಗುತ್ತದೆ. ಪ್ರತಿ ದಿವಸ ಮೂರು ನಾಲ್ಕು ಸಲ ಗ್ರಿಡ್ ಫೇಲ್ಯೂರ್ ಆಗುತ್ತಿದೆಯೆಂದರೆ ಆ ಸಿಸ್ಟಂನ್ನು ಸರಿ ಮಾಡಿ. ತಾವು ವಿಶ್ವಬ್ಯಾಂಕ್ ಸ್ಕೀಮ್‌ನಲ್ಲಿ ತೆಗೆದುಕೊಂಡಿರುವ ಕ್ರಮಗಳ ಬಗ್ಗೆ ಮಾಹಿತಿ ನೀಡಿದ್ದೀರಿ. ಅದೆಲ್ಲವನ್ನು ನಾವು ಅಪ್ರಿಶಿಯೇಟ್ ಮಾಡುತ್ತೇವೆ. ಈ ಕ್ಷಣದಲ್ಲಿ ಏನು ಮಾಡಬೇಕು ಅದನ್ನು ಮಾಡಿ.

ಹಾಸನದಲ್ಲಿ ಟ್ಯಾಪಿಂಗ್ ಮಾಡಿರುವುದನ್ನು ನಿಲ್ಲಿಸಿ. ಇದಕ್ಕೆ ನೀವು ಒಂದೂವರೆ ವರ್ಷಗಳನ್ನು ಏಕೆ ತೆಗೆದುಕೊಳ್ಳುತ್ತಿದ್ದೀರಿ? ಇರುವ ಮಾರ್ಗದಲ್ಲಿ ಅನ್- ಅಥರೈಸ್ಡ್ ಟ್ಯಾಪಿಂಗ್ ಇದೆ, ಅದನ್ನು ನಿಲ್ಲಿಸುತ್ತೇವೆ ಎಂದಾದರೂ ಮಾನ್ಯಸಚಿವರು ಹೇಳಬೇಕಲ್ಲವೇ?

ಶ್ರೀ ಬಸವರಾಜ ಹೆಚ್ ಪಾಟೀಲ್ ಮಾನ್ಯ ಅಧ್ಯಕ್ಷರೇ, ಮಾನ್ಯಸದಸ್ಯರ ಕಳಕಳಿ ನನಗೆ ಅರ್ಥವಾಗುತ್ತಿದೆ. ಅದಷ್ಟು ಬೇಗನೇ ಎಲ್ಲಿ ವಿದ್ಯುತ್ ಕಳ್ಳತನವಾಗುತ್ತಿದೆಯೋ ಅದನ್ನು ತಪ್ಪಿಸಲಿಕ್ಕೆ ಕ್ರಮ ಕೈಗೊಳ್ಳುತ್ತೇನೆ.

ಶ್ರೀ ಎ. ರಾಮದಾಸ್: ಮಾನ್ಯ ಅಧ್ಯಕ್ಷರೆ,

ಅಧ್ಯಕ್ಷರು: ನಿಮ್ಮ ಕಳಕಳಿ ನನಗೆ ಅರ್ಥವಾಗಿದೆ, ನಾನು ಅದನ್ನು ಸರಿಪಡಿಸುತ್ತೇನೆಂದು ಹೇಳಿದ್ದಾರಲ್ಲಾ, ಮತ್ತೆ ಏಕೆ ನೀವು ಪ್ರಸ್ತಾಪಿಸುತ್ತೀರಿ? ಅವರನ್ನು ಹೊಸದಾಗಿ ಮಂತ್ರಿಗಳಾಗಿದ್ದರೆ.

ಶ್ರೀ ಕೆ. ಜಯಪ್ರಕಾಶ್ ಹೆಗಡೆ: ಮಾನ್ಯ ಅಧ್ಯಕ್ಷರೇ, ಹೊಸದಾಗಿ ಮಂತ್ರಿ ಮಂಡಲಕ್ಕೆ ಸೇರಿರುವವರನ್ನು ಸದನಕ್ಕೆ ಪರಿಚಯಿಸಿ ಕೊಟ್ಟಿದ್ದರೆ ಒಳ್ಳೆಯದಿತ್ತು.

ಅಧ್ಯಕ್ಷರು: ಹೊಸದಾಗಿ ಮಂತ್ರಿಗಳಾಗಿರುವವರು ಇನ್ನೂ ಕೆಲವರು ಸದನಕ್ಕೆ ಬಂದಿಲ್ಲ ಪ್ರಶ್ನೋತ್ತರ ಮುಗಿದ ನಂತರ ನೋಡೋಣ.

ಬೆಂಗಳೂರು ನಗರದಲ್ಲಿ ಮಳೆಯಿಂದ ಉಂಟಾದ ಹಾನಿ

ಚುಕ್ಕೆ ಗುರುತಿನ ಪ್ರಶ್ನೆಗಳಿಗೆ ಸದನದಲ್ಲಿ ನೀಡಲಾದ ಉತ್ತರಗಳು

2(27) - ಶ್ರೀ ಕಟ್ಟಾ ಸುಬ್ರಮಣ್ಯ ನಾಯ್ಡು (ಶಿವಾಜಿನಗರ) ಮಾನ್ಯ ಮುಖ್ಯಮಂತ್ರಿಯವರು ಈ ಕೆಳಕಂಡ ಪ್ರಶ್ನೆಗಳಿಗೆ ಉತ್ತರಿಸುವರು?

ಅ) ಬೆಂಗಳೂರು ನಗರದಲ್ಲಿ ಮೇ ತಿಂಗಳಲ್ಲಿ ಬಿದ್ದ ಮಳೆಯಿಂದ ಸಾವಿಗೀಡಾದವರ ಸಂಖ್ಯೆ ಎಷ್ಟು?

ಆ) ಮಳೆಯಿಂದ ಉಂಟಾಗಿರುವ ಹಾನಿಯ ಪ್ರಮಾಣವೆಷ್ಟು?